# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಸೆಪ್ಟೆಂಬರ್ 02, 2020

ಸಂಪುಟ : 47 ಸಂಚಿಕೆ : 113 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಕೊರೊನಾದಿಂದ ಮೃತಪಟ್ಟವರ ಕಳೇಬರ ಕುಟುಂಬದವರಿಗೆ ನಿರಾಕರಿಸಲಾಗದು

ದಾವಣಗೆರೆ, ಸೆ. 1 - ಕೊರೊನಾಗೆ ಸಿಲುಕಿ ಸಾವನ್ನಪ್ಪಿದವರ ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸುವುದಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಹಲವಾರು ಗೊಂದಲಗಳಿವೆ. ಕೊರೊನಾದಿಂದ ಮೃತರ ಕಳೇಬರವನ್ನು ಕುಟುಂಬದವರಿಗೆ ನೀಡುವುದಿಲ್ಲ ಎಂದೂ ಕೆಲವರು ಭಾವಿಸಿದ್ದಾರೆ. ಆದರೆ, ಕೊರೊನಾಗೆ ಸಿಲುಕಿ ಸಾವನ್ನಪ್ಪಿದವರು ಹಾಗೂ ಕೊರೊನಾ ಶಂಕಿತರ ಮೃತದೇಹಗಳನ್ನು ಕುಟುಂಬದವರಿಗೆ ಹಸ್ತಾಂತರಿಸುವ ಬಗ್ಗೆ ಸರ್ಕಾರ ಸ್ಪಷ್ಟವಾದ ಆದೇಶವನ್ನೇ ಹೊರಡಿಸಿರುವುದು ಗಮನಾರ್ಹ.

ಕೊರೊನಾದಿಂದ ಮೃತರ ಕಳೇಬರಗಳನ್ನು ನೀಡಲು ಲಂಚ ಕೇಳಲಾಗುತ್ತಿದೆ ಎಂದು ಇತ್ತೀಚೆಗೆ ನಡೆದ ಜಿಲ್ಲಾ ಪಂಚಾಯ್ತಿ ಸಭೆಯಲ್ಲಿ ಜನಪ್ರತಿನಿಧಿಗಳು ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇತ್ತೀಚೆಗೆ ಆಗಸ್ಟ್ 6ರಂದು ಹೊರಡಿಸಿದ ಆದೇಶ ಗಮನಾರ್ಹವಾಗಿದೆ.

ಕೊರೊನಾ ಇದೆ ಎಂಬ ಕಾರಣಕ್ಕಾಗಿ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸುವುದನ್ನು ನಿರಾಕರಿಸುವಂತಿಲ್ಲ. ಒಂದು ವೇಳೆ ಕುಟುಂಬದವರು ಯಾವುದೋ ಕಾರಣಕ್ಕೆ ಅಂತ್ಯಕ್ರಿಯೆ ನಡೆಸಲು ತಮ್ಮಿಂದ ಸಾಧ್ಯವಾಗದು ಎಂದು ಹೇಳಿದಾಗ ಮಾತ್ರ ಆರೋಗ್ಯ ಪ್ರಾಧಿಕಾರ ಮೃತದೇಹದ ಅಂತ್ಯಕ್ರಿಯೆ ನಡೆಸಬೇಕು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಅಲ್ಲದೇ ಸುಪ್ರೀಂ ಕೋರ್ಟ್ ಎಲ್ಲಾ ರಾಜ್ಯಗಳಿಗೆ ಕೆಲ ಪ್ರಮುಖ ನಿರ್ದೇಶನಗಳನ್ನು ನೀಡಿದೆ. ರಾಜ್ಯ ಹೈಕೋರ್ಟ್ ಕೆಲ ಟಿಪ್ಪಣಿಗಳನ್ನು ಮಾಡಿದೆ. ಅದರ ಅನ್ವಯ ಮೃತದೇಹ ಹಸ್ತಾಂತರಿಸುವ ಮಾರ್ಗಸೂಚಿಗಳಲ್ಲಿ ಬದಲಾವಣೆ ಮಾಡಿರುವುದಾಗಿ ರಾಜ್ಯ ಸರ್ಕಾರ ತಿಳಿಸಿದೆ. ಮೃತರು ಇಲ್ಲವೇ ಕುಟುಂಬದವರನ್ನು ಕಳಂಕಕ್ಕೆ ಗುರಿ ಮಾಡಬಾರದು. ಮೃತರ ಘನತೆ ಕಾಯ್ದುಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಕಳೇಬರದ ಗೌರವ, ಕುಟುಂಬದವರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಂಪ್ರದಾಯಗಳನ್ನು ಗೌರವಿಸಬೇಕು ಹಾಗೂ ರಕ್ಷಿಸಬೇಕು. ಮೃತದೇಹವನ್ನು ಅವಸರದಲ್ಲಿ ವಿಲೇವಾರಿ ಮಾಡುವುದನ್ನು ಕಟ್ಟುನಿಟ್ಟಾಗಿ



ತಪ್ಪಿಸಬೇಕು ಎಂದು ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ.

ಪ್ರತಿಯೊಂದು ಸಾವಿನ ಸಂದರ್ಭದಲ್ಲೂ ಕೊರೊನಾ ಪರೀಕ್ಷೆಗಾಗಿ ಒತ್ತಾಯಿಸಬಾರದು. ಫ್ಲು, ಉಸಿರಾಟದ ತೀವ್ರ ಸಮಸ್ಯೆ ಇದ್ದ ಸಂದರ್ಭದಲ್ಲಿ ಸಾವಿನ ಆರು ಗಂಟೆಯ ಒಳಗೆ ಕೊರೊನಾ ಪರೀಕ್ಷೆಗಾಗಿ ಗಂಟಲು ದ್ರವ ತೆಗೆದುಕೊಳ್ಳಬೇಕು.

ಆನಂತರ ವರದಿ ಬರುವವರೆಗೂ ಕಾಯದೇ ಗೌರವದೊಂದಿಗೆ ಶಂಕಿತ ಮೃತದೇಹವನ್ನು ಕುಟುಂಬ

### ಸುಪ್ರೀಂ ಕೋರ್ಟ್ ನಿರ್ದೇಶನ, ಹೈಕೋರ್ಟ್ ಟಿಪ್ಪಣಿಗಳ ನಂತರ ರಾಜ್ಯ ಸರ್ಕಾರದ ಪರಿಷ್ಕೃತ ಆದೇಶದಲ್ಲಿ ಸ್ಪಷ್ಟ ಸೂಚನೆ

ದವರಿಗೆ ಇಲ್ಲವೇ ಸಂಬಂಧಿಕರಿಗೆ ಹಸ್ತಾಂತರಿಸಬೇಕು. ಯಾವುದೇ ಸಂದರ್ಭದಲ್ಲಿ ಮೃತದೇಹವನ್ನು ಹಸ್ತಾಂತರಿಸುವುದು ವಿಳಂಬವಾಗಬಾರದು ಎಂದು ಆದೇಶದಲ್ಲಿ ಹೇಳಲಾಗಿದೆ. ಈ ರೀತಿ ಶಂಕಿತ ಮೃತದೇಹದ ಅಂತ್ಯಕ್ರಿಯೆ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಆದೇಶದಲ್ಲಿ ವಿವರಿಸಲಾಗಿದೆ.

ಕುಟುಂಬದವರು ಯಾವುದೇ ಕಾರಣಗಳಿಗಾಗಿ ಕೊರೊನಾದಿಂದ ಮೃತಪಟ್ಟವರ ಕಳೇಬರವನ್ನು ಸ್ವೀಕರಿ

### ಸಾವಿನ ಸಂದರ್ಭದಲ್ಲೂ ಕೊರೊನಾ ಪರೀಕ್ಷೆಗೆ ಒತ್ತಾಯ ಮಾಡುವಂತಿಲ್ಲ

ಸಲು ಇಲ್ಲವೇ ಅಂತ್ಯಕ್ರಿಯೆ ನೆರವೇರಿಸಲು ಸಾಧ್ಯವಾಗದು ಎಂದು ತಿಳಿಸಿದಾಗ ಸ್ಥಳೀಯ ವೈದ್ಯಕೀಯ ಪ್ರಾಧಿಕಾರ ಗೌರವದೊಂದಿಗೆ ಕುಟುಂಬದವರ ಸಂಪ್ರದಾಯಗಳಿಗೆ ಅನುಗುಣವಾಗಿ ಅಂತ್ಯಕ್ರಿಯೆ ನೆರವೇರಿಸಬೇಕು.

ಆಸ್ಪತ್ರೆಗಳು ಮೃತದೇಹವನ್ನು ಸ್ವಚ್ಛವಾಗಿ, ಸೋರಿಕೆ ರಹಿತವಾದ ಜಿಪ್ಪರ್ ಬಾಡಿ ಬ್ಯಾಗ್‌ನಲ್ಲಿ ಕುಟುಂಬದವರಿಗೆ ನೀಡಬೇಕು. ಕುಟುಂಬದವರು ಬಯಸಿದರೆ ಬಾಡಿ ಬ್ಯಾಗ್‌ನ ಜಿಪ್ ತೆಗೆದು ಮುಖ ದರ್ಶನ ಪಡೆಯಲು ಕುಟುಂಬದ ಸದಸ್ಯರು, ಸಂಬಂಧಿಕರು ಹಾಗೂ ಸ್ನೇಹಿತರಿಗೆ ಆಸ್ಪತ್ರೆಯ ಸಿಬ್ಬಂದಿ ಅವಕಾಶ ನೀಡಬೇಕು ಎಂಬ (2ನೇ ಪುಟಕ್ಕೆ)

## ಕೆಎಸ್ಸಾರ್ಟಿಸಿ ಬಸ್‌ಗಳಲ್ಲಿ ಸಾಮಾಜಿಕ ಅಂತರಕ್ಕೆ ತೆರೆ

ಬೆಂಗಳೂರು, ಸೆ. 1 - ಕೋವಿಡ್ ಕಾರಣದಿಂದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಸೀಮಿತ ಸಂಖ್ಯೆಯ ಪ್ರಯಾಣಿಕರಿಗೆ ಮಾತ್ರ ನೀಡಿದ್ದ ಅವಕಾಶವನ್ನು ಈಗ ವಾಪಸ್ ಪಡೆದು, ಪೂರ್ಣ ಪ್ರಮಾಣದ ಆಸನಗಳಲ್ಲಿ ಪ್ರಯಾಣಿಸಲು ಅನುಮತಿ ನೀಡಲಾಗಿದೆ. ಆದರೆ ನಿಂತು ಬಸ್‌ನಲ್ಲಿ ಪ್ರಯಾಣಿಸಲು ಅವಕಾಶ ಇಲ್ಲ.

ಅನ್‌ಲಾಕ್-4ರ ಮಾರ್ಗಸೂಚಿ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಯು ಮಾರ್ಗಸೂಚಿಗಳನ್ನು ಮಾರ್ಪಡಿಸಿದ್ದು, ಅದರಂತೆ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಎಲ್ಲ ಆಸನಗಳಲ್ಲೂ ಪ್ರಯಾಣಿಕರು ಕುಳಿತು ಪ್ರಯಾಣಿಸಲು ಅವಕಾಶ ನೀಡಲಾಗಿದೆ.



### ಎಲ್ಲಾ ಸೀಟುಗಳಲ್ಲಿ ಪ್ರಯಾಣಿಕರು ಕೂರಲು ಅನುಮತಿ

ಸಾಮಾಜಿಕ ಅಂತರ ಹೊರತುಪಡಿಸಿ ಉಳಿದಂತೆ ಬಸ್‌ನಲ್ಲಿ ಎಲ್ಲ ಕೊರೊನಾ ನಿಯಂತ್ರಣ ಕ್ರಮಗಳನ್ನು ಪಾಲಿಸಬೇಕು ಎಂದು ಸಾರಿಗೆ ಇಲಾಖೆಯ ಅಧೀನ ಕಾರ್ಯದರ್ಶಿ ಸುತ್ತೋಲೆಯಲ್ಲಿ ತಿಳಿಸಿದ್ದು, ಪ್ರಯಾಣಿಕರು ನಿಗದಿಪಡಿಸಿರುವ ಆಸನಗಳಲ್ಲಿ ಪ್ರಯಾಣಿಸಬಹುದು. ಆದರೆ, (2ನೇ ಪುಟಕ್ಕೆ)

# ಸಾಲದ ಕಂತು ವಿಸ್ತರಿಸಬಹುದು

## 2 ವರ್ಷ ವಿಸ್ತರಣೆಗೆ ಬ್ಯಾಂಕುಗಳಿಗೆ ಅವಕಾಶ ಇದೆ ಎಂದು ಸುಪ್ರೀಂಗೆ ಕೇಂದ್ರ ಮಾಹಿತಿ

ನವದೆಹಲಿ, ಸೆ. 1 - ಕೊರೊನಾ ವೈರಸ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸಾಲದ ಕಂತುಗಳಿಗೆ ನೀಡಲಾಗಿದ್ದ ವಿನಾಯಿತಿಯನ್ನು ಎರಡು ವರ್ಷಗಳ ಕಾಲ ವಿಸ್ತರಿಸಬಹುದಾಗಿದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸಾಲದ ಕಂತು ಮರು ಪಾವತಿಗೆ ನೀಡಲಾಗಿದ್ದ ವಿನಾಯಿತಿಯ ಗಡುವು ಸೋಮವಾರವಷ್ಟೇ ಅಂತ್ಯಗೊಂಡಿತ್ತು. ಅದರ ಮರುದಿನ ಸುಪ್ರೀಂ ಕೋರ್ಟ್‌ಗೆ ಸರ್ಕಾರ ಈ ಮಾಹಿತಿ ನೀಡಿದೆ.

ಕೊರೊನಾ ಹಿನ್ನೆಲೆಯಲ್ಲಿ ವ್ಯಕ್ತಿಗಳು ಹಾಗೂ ಕಾರ್ಪೊರೇಟ್‌ಗಳು ಪಡೆದ ಸಾಲದ ಕಂತು ಮರು ಪಾವತಿಸಲು ಬ್ಯಾಂಕುಗಳು ಆರು ತಿಂಗಳವರೆಗೆ ಅಂದರೆ ಆಗಸ್ಟ್ 31ರವರೆಗೆ ವಿನಾಯಿತಿ ನೀಡಬಹುದು ಎಂದು ರಿಸರ್ವ್ ಬ್ಯಾಂಕ್ ತಿಳಿಸಿತ್ತು. ಈ ಬಗ್ಗೆ ಸುಪ್ರೀಂ



> ಸುಪ್ರೀಂ ಕೋರ್ಟ್ ಈ ಬಗ್ಗೆ ಪರಿಶೀಲಿಸಬಹುದಾಗಿದೆ. ಈ ವಿಷಯದ ಬಗ್ಗೆ ನಾಳೆ ಇಲ್ಲವೇ ನಾಡಿದ್ದು ಪರಿಶೀಲಿಸಬಹುದು. ಬಡ್ಡಿಗೂ ಬಡ್ಡಿ ವಿಧಿಸುವ ವಿಷಯದ ಕುರಿತು ಆರ್.ಬಿ.ಐ. ಅಧಿಕಾರಿಗಳ ಜೊತೆ ನಾವು ಚರ್ಚಿಸುತ್ತಿದ್ದೇವೆ
>
> - ತುಶಾರ್ ಮೆಹ್ತಾ

ಕೋರ್ಟ್ ಎದುರು ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, ವಿನಾಯಿತಿ ನೀಡಲಾದ ಅವಧಿಯಲ್ಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ರಿಸರ್ವ್ ಬ್ಯಾಂಕ್ ಹಾಗೂ ಬ್ಯಾಂಕರ್‌ಗಳ ಒಕ್ಕೂಟದ ಜೊತೆ ಸರ್ಕಾರ ಕಾರ್ಯ ನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ. ಇದರಲ್ಲಿ ಹಲವಾರು ವಿಷಯಗಳು ಸೇರಿಕೊಂಡಿವೆ. ಜಿಡಿಪಿ ಶೇ.23ರಷ್ಟು ಕುಸಿದಿದೆ ಹಾಗೂ ಆರ್ಥಿಕ ಒತ್ತಡವಿದೆ ಎಂದು ಮೆಹ್ತಾ ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

ಬಡ್ಡಿಗೂ ಬಡ್ಡಿ ವಿಧಿಸುತ್ತಿರುವ ವಿಷಯದ ಕುರಿತು ನಾವು ಪರಿಶೀಲನೆ ನಡೆಸುತ್ತೇವೆ ಎಂದು ನ್ಯಾಯಮೂರ್ತಿ ಎಂ.ಆರ್. ಷಾ ಅವರನ್ನು ಒಳಗೊಂಡ ಪೀಠ ಹೇಳಿದೆ. ನ್ಯಾಯಾಲಯ ಈ ಕುರಿತ ವಿಚಾರಣೆಯನ್ನು ಬುಧವಾರವೂ ನಡೆಯಲಿದೆ.

ಆರು ತಿಂಗಳ ಕಂತು ವಿನಾಯಿತಿ ಅವಧಿಯಲ್ಲಿನ ಬಡ್ಡಿ ಮನ್ನಾ ಮಾಡುವ ಬಗ್ಗೆ ಸರ್ಕಾರದ ನಿಲುವು ತಿಳಿಸಬೇಕು. ಸರ್ಕಾರ ಈ ವಿಷಯದಲ್ಲಿ ಆರ್.ಬಿ.ಐ. ಹಿಂದೆ ಅಡಗಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಕಳೆದ ವಾರ ತಿಳಿಸಿತ್ತು.

ಕಂತು ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದರೆ ಬ್ಯಾಂಕುಗಳ ಹಣಕಾಸು ಆರೋಗ್ಯ ಹಾಗೂ ಸ್ಥಿರತೆಗೆ ಧಕ್ಕೆಯಾಗುತ್ತದೆ. ಹೀಗಾಗಿ ಬಡ್ಡಿ ಮನ್ನಾ ಮಾಡಲು ಸಾಧ್ಯವಾಗದು ಎಂದು ಆರ್.ಬಿ.ಐ. ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಸಾಲದ ಮೇಲಿನ ಬಡ್ಡಿ ಪಾವತಿಗೆ ಹೆಚ್ಚಿನ ವಿನಾಯಿತಿ ನೀಡಬೇಕು ಎಂದು ಗಜೇಂದ್ರ ಶರ್ಮ ಎಂಬ ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ.

## ಬಡ್ಡಿ ಮನ್ನಾಗೆ ಒಲವು ತೋರದ ಕೇಂದ್ರ ಸರ್ಕಾರ

ನವದೆಹಲಿ, ಸೆ. 1 – ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಿಕೆಯಾದ ಸಾಲದ ಕಂತುಗಳ ಮೇಲಿನ ಬಡ್ಡಿ ಮನ್ನಾ ಮಾಡುವುದು ಹಣಕಾಸಿನ ಮೂಲ ನೀತಿಗಳಿಗೆ ವಿರುದ್ಧವಾಗಿದೆ. ನಿಯಮಿತವಾಗಿ ಸಾಲ ಮರು ಪಾವತಿ ಮಾಡಿದವರಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಆದರೆ, ಒತ್ತಡದಲ್ಲಿರುವ ಸಾಲಗಾರರ ಸಾಲದ ಮರು ಪಾವತಿಗೆ ಎರಡು ವರ್ಷಗಳ ಕಾಲ ತಡೆ ಹಾಕುವ ಯೋಜನೆ ಯನ್ನು ರಿಸರ್ವ್ ಬ್ಯಾಂಕ್ ರೂಪಿಸಿದೆ ಎಂದು ಸುಪ್ರೀಂ ಕೋರ್ಟ್‌ಗೆ (3ನೇ ಪುಟಕ್ಕೆ)

# 291 ದೃಢ, 4 ಸಾವು

## 362 ಬಿಡುಗಡೆ, 2217 ಸಕ್ರಿಯ



ದಾವಣಗೆರೆ, ಸೆ. 1- ಜಿಲ್ಲೆಯಲ್ಲಿ ಮಂಗಳವಾರ 291 ಕೊರೊನಾ ಪಾಸಿಟಿವ್ ಪ್ರಕರಣ ಗಳು ವರದಿಯಾಗಿದ್ದು, 4 ಜನರು ಸಾವನ್ನಪ್ಪಿದ್ದಾರೆ. 362 ಜನರು ಗುಣಮುಖರಾಗಿ ಆಸ್ಪತ್ರೆಯಿಂದ ಹೊರ ಬಂದಿದ್ದಾರೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ 9777 ಜನರಲ್ಲಿ ಸೋಂಕು ಕಾಣಿಸಿ ಕೊಂಡಿದ್ದು, 7365 ಜನರು ಸೋಂಕು ಮುಕ್ತರಾಗಿ ದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 2217 ಸಕ್ರಿಯ ಪ್ರಕರಣಗಳಿವೆ.

ದಾವಣಗೆರೆ ತಾಲ್ಲೂಕಿನಲ್ಲಿ 143, ಹರಿಹರ 30, (2ನೇ ಪುಟಕ್ಕೆ)

## ರಂಭಾಪುರಿ ಶ್ರೀಗಳಿಗೆ ಸೋಂಕು ದೃಢ



ಚಿಕ್ಕಮಗಳೂರು, ಆ. 1- ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರುಗಳಾದ ಶ್ರೀ ಪ್ರಸನ್ನ ರೇಣುಕ ವೀರ ಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಮಂಗಳವಾರ ಕೊರೊನಾ ಸೋಂಕು ದೃಢಪಟ್ಟಿದೆ.

ಇತ್ತೀಚೆಗೆ ಶ್ರೀಗಳಿಗೆ ಜ್ವರ ಕಾಣಿಸಿಕೊಂಡಿತ್ತು ಎನ್ನಲಾಗಿದ್ದು, ಸ್ಥಳೀಯ ಆರೋಗ್ಯ ಕೇಂದ್ರದ ವೈದ್ಯರು ಮಂಗಳವಾರ ಕೋವಿಡ್ -19 ಟೆಸ್ಟ್ ಮಾಡಿಸಿದಾಗ ಸೋಂಕು ದೃಢಪಟ್ಟಿದೆ. ಶ್ರೀಗಳು ಚಿಕಿತ್ಸೆಗಾಗಿ ಬೆಂಗಳೂರು ಆಸ್ಪತ್ರೆಗೆ ದಾಖಲಾಗಿದ್ದಾರೆ.

## ಮಾದಕ ಸಾಗಣೆ : ಚಿತ್ರರಂಗದ 15 ಜನ



ಬೆಂಗಳೂರು, ಸೆ. 1 – ಕನ್ನಡ ಚಿತ್ರರಂಗದ ಕನಿಷ್ಠ 15 ಜನರು ಮಾದಕ ಸಾಗಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಚಿತ್ರ ನಿರ್ಮಾಪಕ ಹಾಗೂ ಪತ್ರಕರ್ತ ಇಂದ್ರಜಿತ್ ಲಂಕೇಶ್ ಹೇಳಿದ್ದಾರೆ.

ಚಿತ್ರೋದ್ಯಮದಲ್ಲಿರುವ ಮಾದಕ ಜಾಲದ ಕುರಿತು ಪೊಲೀ ಸರಿಗೆ ಮಾಹಿತಿ ನೀಡಿದ ನಂತರ ಅವರು ಈ ಹೇಳಿಕೆ ನೀಡಿದ್ದಾರೆ. ಮಾದಕ ವ್ಯವಹಾರದಲ್ಲಿರುವ ಕನಿಷ್ಠ 15 ಜನರ ಬಗ್ಗೆ ನನಗೆ ತಿಳಿದಿದ್ದು, ಅವರ ಮಾಹಿತಿಯನ್ನು ಪೊಲೀಸರಿಗೆ ತಿಳಿಸಿದ್ದೇನೆ ಎಂದವರು (3ನೇ ಪುಟಕ್ಕೆ)

## ದೇಶದಾದ್ಯಂತ ಜೆಇಇ-ಮೇನ್ಸ್ ಪರೀಕ್ಷೆ ಆರಂಭ

ನವದೆಹಲಿ, ಸೆ. 1 - ಕಠಿಣ ಮುನ್ನೆಚ್ಚರಿಕೆಗಳ ನಡುವೆ ಜೆಇಇ - ಮೇನ್ಸ್ ಪ್ರವೇಶ ಪರೀಕ್ಷೆ ದೇಶಾದ್ಯಂತ ಮಂಗಳವಾರ ಆರಂಭವಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಸಾಮಾಜಿಕ ಅಂತರಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ವಿದ್ಯಾರ್ಥಿಗಳಿಗೆ ಹಂತ ಹಂತವಾಗಿ ಪ್ರವೇಶ ನೀಡುವ ಜೊತೆಗೆ, ಪ್ರವೇಶ ದ್ವಾರದ ಬಳಿ ಸ್ಯಾನಿಟೈಜರ್ ಇರಿಸಲಾಗಿತ್ತು. ಮಾಸ್ಕ್‌ಗಳನ್ನು ವಿತರಿಸಲಾಗಿತ್ತು.

ಕೊರೊನಾ ಹಿನ್ನೆಲೆಯಲ್ಲಿ ಎರಡು ಬಾರಿ ಮುಂದೂಡಿಕೆಯಾಗಿದ್ದ ಪರೀಕ್ಷೆಗಳು, ಅಂತಿಮವಾಗಿ ಸೆಪ್ಟೆಂಬರ್ 1ರಿಂದ ಆರಂಭವಾಗಿವೆ. ಸೆಪ್ಟೆಂಬರ್ 6ರವರೆಗೆ ಪರೀಕ್ಷೆಗಳು ನಡೆಯಲಿವೆ.



ಎಲ್ಲಾ ಅಭ್ಯರ್ಥಿಗಳು ಮಾಸ್ಕ್ ಹಾಗೂ ಸ್ಯಾನಿಟೈಜರ್ ಜೊತೆಗೆ ಪರೀಕ್ಷಾ ಕೇಂದ್ರ ಪ್ರವೇಶಿಸಲು ಅವಕಾಶ ನೀಡಲಾಗಿತ್ತು. ಪರೀಕ್ಷಾ ಪ್ರಾಧಿಕಾರದ ನೀಡಿದ ಮಾಸ್ಕ್‌ಗಳನ್ನೇ ಅವರು ಬಳಸಬೇಕಿದೆ. ಪ್ರತಿಯೊಬ್ಬ ಅಭ್ಯರ್ಥಿಗೆ ಮೂರು ಪದರದ ಮಾಸ್ಕ್ ನೀಡಲಾಗಿತ್ತು (2ನೇ ಪುಟಕ್ಕೆ)

### ಬಿಐಇಟಿಯಲ್ಲಿ ಜೆಇಇ-ಮೇನ್ಸ್ ಪರೀಕ್ಷೆ

ದಾವಣಗೆರೆ ನಗರದ ಬಿಐಇಟಿ ಕಾಲೇಜಿನಲ್ಲಿ ಜೆಇಇ - ಮೇನ್ಸ್ ಪರೀಕ್ಷೆಯನ್ನು ನಡೆಸಲಾಗಿದೆ. ಮೊದಲ ದಿನದಂದು ಆರ್ಕಿಟೆಕ್ಚರ್ ವಿಷಯಕ್ಕೆ ಸಂಬಂಧಿಸಿದಂತೆ ಪರೀಕ್ಷೆ ನಡೆಸಲಾಗಿತ್ತು.

ಪರೀಕ್ಷೆಗೆ 211 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿದ್ದರು. ಆದರೆ, 128 ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಿದ್ದಾರೆ ಎಂದು ಪರೀಕ್ಷಾ ಕೇಂದ್ರದ ಮೂಲಗಳು ತಿಳಿಸಿವೆ.

## ಇನ್ನಷ್ಟು ವಿಶೇಷ ರೈಲುಗಳಿಗೆ ಸಿದ್ಧತೆ

ನವದೆಹಲಿ, ಸೆ. 1 - ಹೆಚ್ಚಿನ ಬೇಡಿಕೆ ಇರುವ ಪ್ರದೇಶಗಳಲ್ಲಿ ಪ್ರಯಾಣಿಕರಿಗೆ ನೆರವಾಗುವ ಸಲುವಾಗಿ ಮತ್ತಷ್ಟು ವಿಶೇಷ ರೈಲುಗಳನ್ನು ಬಿಡಲು ರೈಲ್ವೆ ಮುಂದಾಗಿದೆ. ಪ್ರಸಕ್ತ ರೈಲ್ವೆ 230 ವಿಶೇಷ ರೈಲುಗಳನ್ನು ನಿರ್ವಹಿಸುತ್ತಿದೆ.



ರಾಜ್ಯಗಳ ಅನುಮತಿಯ ನಂತರವೇ ಹೆಚ್ಚಿನ ರೈಲು ಬಿಡಲಾಗುವುದು ಎಂದು ರೈಲ್ವೆ ವಕ್ತಾರರು ಹೇಳಿದ್ದಾರಾದರೂ, ಎಷ್ಟು ರೈಲುಗಳನ್ನು ಬಿಡಲಾಗುವುದು ಎಂಬ ಬಗ್ಗೆ ಹೇಳಿಲ್ಲ.

ಪ್ರಸಕ್ತ ಕೊರೊನಾ ಹಿನ್ನೆಲೆಯಲ್ಲಿ ಎಲ್ಲ ಸಾಮಾನ್ಯ ರೈಲುಗಳನ್ನು ರದ್ದುಗೊಳಿಸಲಾಗಿದೆ. ವಿಶೇಷ ರೈಲುಗಳನ್ನು ಮಾತ್ರ (2ನೇ ಪುಟಕ್ಕೆ)

## ಎಜಿಆರ್‌ಗೆ 10 ವರ್ಷ ಗಡುವು



ನವದೆಹಲಿ, ಸೆ. 1 – ದೂರಸಂಪರ್ಕ ಇಲಾಖೆಗೆ ಟೆಲಿಕಾಂ ಕಂಪನಿಗಳು ಎ.ಜಿ. ಆರ್. (ಅಡ್ಜೆಸ್ಟೆಡ್ ಗ್ರಾಸ್ ರೆವಿನ್ಯೂ) ಪಾವತಿಸಲು ಸುಪ್ರೀಂ ಕೋರ್ಟ್ ಹತ್ತು ವರ್ಷಗಳ ಷರತ್ತಿನ ಅವಧಿ ನೀಡಿದೆ.

ವೊಡಫೋನ್ ಐಡಿಯಾ, ಭಾರತಿ ಏರ್‌ಟೆಲ್ ಹಾಗೂ ಟಾಟಾ ಟೆಲಿಸರ್ವೀಸಸ್ ಮತ್ತು ಈಗ ಕೆಲಸ ನಿಲ್ಲಿಸಿರುವ ಕೆಲ (3ನೇ ಪುಟಕ್ಕೆ)


ಹೃದಯಪೂರ್ವಕ ಅಭಿನಂದನೆಗಳು



ದಾವಣಗೆರೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಭಿವೃದ್ಧಿ ಸಮಿತಿಯ ಸದಸ್ಯರಾಗಿ ನೇಮಕಗೊಂಡಿರುವ

ಎಸ್. ಪರಮೇಶ್ವರಪ್ಪ ಬಣಕಾರ

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.



ರಾಕೇಶ್ ಎ.ಹೆಚ್.
ದವನ್ ಕನ್‌ಸ್ಟ್ರಕ್ಷನ್
ಪಿ.ಜೆ. ಬಡಾವಣೆ,
ದಾವಣಗೆರೆ.



ಆವರಗೊಳ್ಳದ ಆರ್. ದಾದಾಪೀರ್‌ಸಾಬ್ ನಿಧನ



ದಾವಣಗೆರೆ ತಾಲ್ಲೂಕಿನ ಆವರಗೊಳ್ಳ ಗ್ರಾಮದ ಜಮೀನ್ದಾರರೂ, ದಾವಣಗೆರೆ ಎಪಿಎಂಸಿಯ ರೆಹಮಾನ್ ಸಾಬ್ ಅಂಡ್ ಸನ್ಸ್ (ಮರ್ಚೆಂಟ್ ಅಂಡ್ ಕಮಿಷನ್ ಏಜೆಂಟ್) ಮಾಲೀಕರೂ

ಆರ್. ದಾದಾಪೀರ್ ಸಾಬ್ ಅವರು

ದಿನಾಂಕ 01.09.2020ರಂದು ಮಂಗಳವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ ಸುಮಾರು 59 ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸಹೋದರರು, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 02.09.2020 ರಂದು ಬುಧವಾರ ಮಧ್ಯಾಹ್ನ 1 ಗಂಟೆಗೆ ಆವರಗೊಳ್ಳ ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ಮೊ. 94483 26730, 99003 39650



ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು





ಇಂದು ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ ಮಾಜಿ ಅಧ್ಯಕ್ಷರು ಮತ್ತು ಉದ್ಯಮಿಗಳಾದ

ಶ್ರೀ ರಮೇಶ್ ಬಿ.ಜೆ.

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು. ವೈಯಕ್ತಿಕ ಮತ್ತು ವೃತ್ತಿಪರ ಜೀವನದಲ್ಲಿ ಇನ್ನು ಅತ್ಯುನ್ನತ ಎತ್ತರಕ್ಕೆ ಏರಲೆಂದು ಆಶಿಸುತ್ತಾ ಹಾಗೂ ನಿಮ್ಮ ಎಲ್ಲಾ ಯಶಸ್ಸುಗಳಿಗೂ ನಾವೆಲ್ಲರೂ ದೇವರಲ್ಲಿ ಪ್ರಾರ್ಥಿಸುತ್ತಾ ಸದಾಕಾಲ ನಿಮ್ಮೊಂದಿಗೆ ಕೈಗೂಡಿಸಿರುವ...

ಶುಭ ಕೋರುವವರು :
ಕಿಯೋನಿಕ್ಸ್ ಯುವ.ಕಾಂ, ಗ್ಲೋಬಲ್ ಟ್ರೇಡರ್ಸ್ ಹಾಗೂ ಜಾಜೂರ್ ಅಂಡ್ ಕೋ ಸಿಬ್ಬಂದಿ ವರ್ಗ



## ನಿಟುವಳ್ಳಿಯಲ್ಲಿ ಪೀರ್ ದೇವರ ಮೆರವಣಿಗೆ

ಮೊಹರಂ ಆಚರಣೆ ಹಿನ್ನೆಲೆಯಲ್ಲಿ ದಾವಣಗೆರೆ - ನಿಟುವಳ್ಳಿಯ ಸೈಯ್ಯದ್ ಪೀರ್ ಬಡಾವಣೆಯಲ್ಲಿ ಪೀರ್ ದೇವರ ಮೆರವಣಿಗೆಯು ಸೋಮವಾರ ನಡೆಯಿತು.

# 4.3 ಲಕ್ಷ ಅಪಘಾತಗಳಲ್ಲಿ 1.54 ಲಕ್ಷ ಸಾವು ದ್ವಿಚಕ್ರ ವಾಹನಗಳ ಅಪಘಾತವೇ ಅತಿ ಹೆಚ್ಚು

ನವದೆಹಲಿ, ಸೆ. 1 – 2019ರಲ್ಲಿ ಭಾರತದಲ್ಲಿ ಒಟ್ಟು 4,37,396 ಅಪಘಾತಗಳು ಸಂಭವಿಸಿದ್ದು, ಇದರಲ್ಲಿ 1,54,732 ಜನ ಸಾವನ್ನಪ್ಪಿದ್ದಾರೆ. ಈ ಅಪಘಾತಗಳಲ್ಲಿ 4,39,626 ಜನರು ಗಾಯಗೊಂಡಿದ್ದಾರೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್.ಸಿ.ಆರ್.ಬಿ.) ತಿಳಿಸಿದೆ.

ಈ ಅಪಘಾತಗಳ ಪೈಕಿ ಶೇ.59.6ಕ್ಕೆ ಅತಿ ವೇಗವೇ ಕಾರಣ. ಇದರಿಂದಾಗಿ 86,241 ಜನರು ಸಾವನ್ನಪ್ಪಿದ್ದಾರೆ ಹಾಗೂ 2,71,581 ಜನರು ಗಾಯಗೊಂಡಿದ್ದಾರೆ ಎಂದು ದಾಖಲೆಗಳು ತಿಳಿಸಿವೆ.

2018ರಲ್ಲಿ ಅಪಘಾತಗಳಿಂದ 1,52,780 ಜನರು ಸಾವನ್ನಪ್ಪಿದ್ದರು. 2019ರಲ್ಲಿ ಸಂಭವಿಸಿದ ಅಪಘಾತಗಳಲ್ಲಿ ದ್ವಿಚಕ್ರ ವಾಹನ ಸವಾರರ ಪಾಲು ಶೇ.38ರಷ್ಟಾಗಿದೆ. ಲಾರಿಗಳ ಅಪಘಾತ ಪ್ರಮಾಣ ಶೇ.14.6, ಕಾರುಗಳದ್ದು ಶೇ.13.7 ಹಾಗೂ ಬಸ್ ಅಪಘಾತಗಳ ಪ್ರಮಾಣ ಶೇ.5.9 ಆಗಿದೆ.

# ಜಿಲ್ಲಾ ಬಿಜೆಪಿ ರೈತ ಮೋರ್ಚಾಕ್ಕೆ ನೇಮಕ

ದಾವಣಗೆರೆ, ಸೆ.1- ಜಿಲ್ಲಾ ಬಿಜೆಪಿ ರೈತ ಮೋರ್ಚಾಕ್ಕೆ ಪದಾಧಿಕಾರಿಗಳನ್ನು ರೈತ ಮೋರ್ಚಾ ಜಿಲ್ಲಾ ಅಧ್ಯಕ್ಷ ಕೆ.ಹೆಚ್. ನಾಗರಾಜ್ ನೇಮಕ ಮಾಡಿದ್ದಾರೆ.

ಅಧ್ಯಕ್ಷರಾಗಿ ನಾಗರಾಜ್ ಕೆ.ಹೆಚ್ (ದಾವಣಗೆರೆ ಉತ್ತರ), ಉಪಾಧ್ಯಕ್ಷರುಗಳಾಗಿ ದ್ಯಾಮನಗೌಡ (ಜಗಳೂರು), ಚಂದ್ರಶೇಖರ (ಚನ್ನಗಿರಿ), ಬಿ.ಜೆ.ಧನಂಜಯ (ಹರಿಹರ ಗ್ರಾಮಾಂತರ), ಅಜ್ಜಣ್ಣ (ದಾವಣಗೆರೆ ದಕ್ಷಿಣ), ವೀರೇಶ್ ಟಿ.ಕೆ. (ಮಾಯಕೊಂಡ) ಆಯ್ಕೆಯಾಗಿದ್ದಾರೆ.

ಪ್ರಧಾನ ಕಾರ್ಯದರ್ಶಿಗಳಾಗಿ ಬಿ.ಕೆ.ಶಿವಕುಮಾರ್ (ದಾವಣಗೆರೆ ಉತ್ತರ), ಕೆ.ಹೆಚ್.ನಾಗನಗೌಡ (ಹರಿಹರ ಗ್ರಾಮಾಂತರ), ಕಾರ್ಯದರ್ಶಿಗಳಾಗಿ ಹರೀಶ್. ಜೆ. ಪಾಟೀಲ್ (ಹೊನ್ನಾಳಿ), ಜಿ.ಪಿ.ಮಂಜುನಾಥ (ಹರಿಹರ ಗ್ರಾಮಾಂತರ), ಎ.ಎಂ. ಶಿವಪ್ರಕಾಶ್ (ಮಾಯಕೊಂಡ), ಹೆಚ್.ಬಿ.ಮಂಜುನಾಥ (ದಾವಣಗೆರೆ ಉತ್ತರ), ಅಜ್ಜಪ್ಪ ಶೇರಾಪುರ (ಹರಿಹರ ನಗರ) ಮತ್ತು ಕೋಶ್ಯಾಧ್ಯಕ್ಷರಾಗಿ ಕೆ.ಗುಡ್ಡೇಶ್ (ಮಾಯಕೊಂಡ) ನೇಮಕಗೊಂಡಿದ್ದಾರೆ.

ಕೆ.ರೇವಣ್ಣ ಸಿದ್ದಪ್ಪ (ಜಗಳೂರು), ಜಿ.ಬಿ.ಪರಮೇಶ್ವರ (ದಾವಣಗೆರೆ ದಕ್ಷಿಣ), ಹೊನ್ನೂರು ಬಸವರಾಜಪ್ಪ (ದಾವಣಗೆರೆ ಉತ್ತರ), ಸುರೇಶ್ ಕಾಶೀಪುರ (ಮಾಯಕೊಂಡ), ಹೆಚ್.ಜಿ.ಮಲ್ಲಿಕಾರ್ಜುನ (ದಾವಣಗೆರೆ ದಕ್ಷಿಣ), ಜಿ.ಎ.ನೀಲಪ್ಪ (ಜಗಳೂರು), ಜಿ.ಆರ್.ಮಹೇಶ್ವರಪ್ಪ (ಜಗಳೂರು), ಹಾಲೇಶ್ ಎಂ.ಎಸ್ (ದಾವಣಗೆರೆ ಉತ್ತರ), ಸುರೇಶ್.ಟಿ.ಪಿ. (ಮಾಯಕೊಂಡ), ನವೀನ್ ಅಮರಾವತಿ (ಹರಿಹರ), ಸದಾನಂದ (ಮಾಯಕೊಂಡ) ಸದಸ್ಯರಾಗಿದ್ದಾರೆ.

# ಕಳ್ಳರ ಬಂಧನ : ಲಕ್ಷ ರೂ. ಮೌಲ್ಯದ ಚಿನ್ನಾಭರಣ, ನಗದು ವಶ



ದಾವಣಗೆರೆ, ಸೆ.1- ಮನೆಗೆ ಕನ್ನ ಹಾಕಿ ಚಿನ್ನಾ ಭರಣ ಮತ್ತು ನಗದು ದೋಚಿ ಪರಾರಿಯಾಗಿದ್ದ ಪ್ರಕರಣವನ್ನು ಬೇಧಿಸಿರುವ ಪೊಲೀಸರು, ಮೂವರನ್ನು ಬಂಧಿಸಿ ಒಂದು ಲಕ್ಷ ಮೌಲ್ಯದ ಚಿನ್ನಾಭರಣ, ನಗದು ವಶಪಡಿಸಿಕೊಂಡಿದ್ದಾರೆ.

ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದವರೆನ್ನಲಾದ ಹೊನ್ನೂರ್ ಸಾಬ್, ಸುಭಾನ್ ಸಾಬ್, ಸಂತೋಷ್ ಬಂಧಿತರು.

ಕಳೆದ ಮಾಹೆ ದಿನಾಂಕ 20ರ ರಾತ್ರಿಯಿಂದ ಹರಿಹರ ತಾಲ್ಲೂಕು ಅಮರಾವತಿಯ ಪ್ರಭುಗೌಡ ಅವರ ಮನೆಯಲ್ಲಿದ್ದ 1 ಲಕ್ಷ ರೂ. ಮೌಲ್ಯದ 25-30 ಗ್ರಾಂ ಬಂಗಾರದ ಒಡವೆ ಮತ್ತು 5 ಸಾವಿರ ನಗದನ್ನು ಬಂಧಿತರು ಕಳವು ಮಾಡಿಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ಹರಿಹರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹರಿಹರ ಸಿಪಿಐ ಎಂ. ಶಿವಪ್ರಸಾದ್ ನೇತೃತ್ವದಲ್ಲಿ ಹರಿಹರ ಗ್ರಾಮಾಂತರ ಠಾಣಾ ಪಿಎಸ್ಐ ಡಿ. ರವಿಕುಮಾರ್ ಮತ್ತು ಸಿಬ್ಬಂದಿಗಳು ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳು ಬಂಧಿತರಾಗಿದ್ದಾರೆ.

# ಜಿಲ್ಲಾ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾಕ್ಕೆ ನೇಮಕ

ದಾವಣಗೆರೆ, ಸೆ.1- ಜಿಲ್ಲಾ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾಕ್ಕೆ ಪದಾಧಿಕಾರಿಗಳು ಹಾಗೂ ಸದಸ್ಯರುಗಳನ್ನು ಜಿಲ್ಲಾ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾ ಅಧ್ಯಕ್ಷ ಕೆ.ಬಸವರಾಜ್ ನೇಮಕ ಮಾಡಿದ್ದಾರೆ.

ಅಧ್ಯಕ್ಷರಾಗಿ ಕೆ.ಬಸವರಾಜ್ (ಚನ್ನಗಿರಿ), ಉಪಾಧ್ಯಕ್ಷರುಗಳಾಗಿ ಬಾರ್ಕಿ ಹೊನ್ನಪ್ಪ (ಹರಿಹರ), ನರೇಂದ್ರ ಕುಮಾರ್ (ದಾವಣಗೆರೆ ದಕ್ಷಿಣ), ಟೈಗರ್ ಆಂಜನಪ್ಪ (ಜಗಳೂರು), ಕುಬೇಂದ್ರೋಜಿರಾವ್ (ಚನ್ನಗಿರಿ), ಆರ್. ಗುರುರಾಜ್ (ದಾವಣಗೆರೆ ಉತ್ತರ) ನೇಮಕಗೊಂಡಿದ್ದಾರೆ.

ಪ್ರಧಾನ ಕಾರ್ಯದರ್ಶಿಗಳಾಗಿ ಎಂ.ಎನ್.ಮಂಜುನಾಥ (ದಾವಣಗೆರೆ ಉತ್ತರ), ಹೆಚ್.ವೈ.ಮಹೇಂದ್ರ (ಮಾಯಕೊಂಡ) ಮತ್ತು ಕಾರ್ಯದರ್ಶಿಗಳಾಗಿ ಟಿ.ಮುದ್ದಪ್ಪ (ಹರಿಹರ), ನವೀನ್.ಜಿ.ಸಿ. (ಹೊನ್ನಾಳಿ), ಗಿರೀಶ್ ಜನ್ನು (ದಾವಣಗೆರೆ ದಕ್ಷಿಣ), ಕಾಂತರಾಜ್ (ಜಗಳೂರು), ಎಸ್.ಬಾಬು (ದಾವಣಗೆರೆ ದಕ್ಷಿಣ) ಮತ್ತು ಕೋಶ್ಯಾಧ್ಯಕ್ಷರಾಗಿ ಪ್ರವೀಣ್ ಪಾಲಂಕರ್ (ಹರಿಹರ ನಗರ).

ಪಿ.ರಮೇಶ್ (ದಾವಣಗೆರೆ ಉತ್ತರ), ಪಿ.ಆನಂದ (ದಾವಣಗೆರೆ ಉತ್ತರ) ಎ.ಆರ್.ತಿಮ್ಮಪ್ಪ (ಚನ್ನಗಿರಿ), ಮಂಜುನಾಥ ಆಚಾರ್ (ಹೊನ್ನಾಳಿ), ಹೆಚ್.ಜಿ.ಗೋಪಾಲಪ್ಪ (ದಾವಣಗೆರೆ ಉತ್ತರ), ಲೋಕೇಶ್ (ಹೊನ್ನಾಳಿ), ಪ್ರವೀಣ ಜಿ.ಪವಾರ್ (ಹರಿಹರ), ಬಿಲ್ಡರ್ ನಾಗರಾಜ್ (ಹೊನ್ನಾಳಿ), ಪ್ರಕಾಶ್ ರಾಯ್ಕರ್ (ದಾವಣಗೆರೆ ಉತ್ತರ), ಅರ್ಜುನ (ದಾವಣಗೆರೆ ದಕ್ಷಿಣ), ಮಂಜುನಾಥ.ಬಿ ಗುಟ್ಟೂರು (ದಾವಣಗೆರೆ ಉತ್ತರ) ಸದಸ್ಯರಾಗಿದ್ದಾರೆ.

# ಸರ್ಕಾರಿ ಗೌರವಗಳೊಂದಿಗೆ ಮುಖರ್ಜಿ ಅಂತ್ಯಕ್ರಿಯೆ



ನವದೆಹಲಿ, ಸೆ. 1 - ನಿನ್ನೆ ಅಗಲಿದ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ಲೋಧಿ ರಸ್ತೆಯಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ಮಂಗಳವಾರ ಮಧ್ಯಾಹ್ನ ನೆರವೇರಿಸಲಾಯಿತು.

ಅವರ ಪುತ್ರ ಅಭಿಜಿತ್ ಮುಖರ್ಜಿ ಅವರು ಅಂತ್ಯಕ್ರಿಯೆ ನೆರವೇರಿಸಿದರು. ಮುಖರ್ಜಿ ಅವರ ಕುಟುಂಬ ಪಿಪಿಇ ಕಿಟ್‌ನಲ್ಲಿ ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿತ್ತು. ಸೈನ್ಯದ ತುಕಡಿಯೊಂದು ಮಾಜಿ ರಾಷ್ಟ್ರಪತಿಗೆ ಗೌರವ ರಕ್ಷೆ ಹಾಗೂ ಕುಶಾಲ ತೋಪಿನ ನಮನ ಸಲ್ಲಿಸಿತು.

ಇದಕ್ಕೂ ಮುಂಚೆ ಪುಷ್ಪದಿಂದ ಅಲಂಕೃತವಾದ ವಾಹನದಲ್ಲಿ ಮುಖರ್ಜಿ ಕಳೇಬರವನ್ನು ಮೆರವಣಿಗೆ ಮೂಲಕ ತರಲಾಯಿತು. 84 ವರ್ಷದ ಮುಖರ್ಜಿ ಸೋಮವಾರ ಸಂಜೆ ಸೈನಿಕ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು.

ಇದಕ್ಕೂ ಮುಂಚೆ ರಾಷ್ಟ್ರಪತಿ ರಾಮನಾಥ ಕೋವಿಂದ್, ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ಪ್ರಧಾನ ಮಂತ್ರಿ ನರೇಂದ್ರ ಮೋದಿ, ಸೈನ್ಯದ ಮೂವರು ಮುಖ್ಯಸ್ಥರು ಹಾಗೂ ಹಲವಾರು ಪಕ್ಷಗಳ ಉನ್ನತ ನಾಯಕರು ಅಗಲಿದ ನಾಯಕನಿಗೆ ಅಂತಿಮ ನಮನ ಸಲ್ಲಿಸಿದರು.

ಗಣ್ಯರಲ್ಲದೇ ವಿವಿಧ ಪಕ್ಷಗಳ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಉದ್ದನೆಯ ಸರದಿಯಲ್ಲಿ ಸಾಮಾಜಿಕ ಅಂತರದೊಂದಿಗೆ ಮಾಸ್ಕ್ ಧರಿಸಿ ಪುಷ್ಪಗುಚ್ಛದೊಂದಿಗೆ ಅಂತಿಮ ನಮನ ಸಲ್ಲಿಸಿದರು.

# ತುಂಗಾದಿಂದ ಭದ್ರಾ ಡ್ಯಾಂಗೆ ನೀರು ಲಿಫ್ಟ್ ಮಾಡಲು ತಕ್ಷಣ ಗಮನ ಹರಿಸಿ

ಮಲೇಬೆನ್ನೂರು, ಸೆ.1- ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 17.5 ಟಿಎಂಸಿ ನೀರನ್ನು ಹರಿಸಿದ ನಂತರ ವಾಣಿ ವಿಲಾಸ ಸಾಗಕ್ಕೆ ನೀರು ಕೊಡಿ ಎಂದು ರೈತ ಸಂಘದ ವಾಸನದ ಓಂಕಾರಪ್ಪ, ಕೆ.ಎನ್.ಹಳ್ಳಿ ಪ್ರಭುಗೌಡ, ಬಿ.ವಸಂತಪ್ಪ, ನಂದಿತಾವರೆ ಶಂಭುಲಿಂಗಪ್ಪ ಅವರು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ತುಂಗಾ, ಭದ್ರಾದಿಂದ ಬರಗಾಲ ಸೀಮೆಯ ಚಿತ್ರದುರ್ಗಕ್ಕೆ ನೀರು ಹರಿಸುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಭದ್ರಾ ಅಚ್ಚುಕಟ್ಟಿನ ರೈತರಿಗೆ ತೊಂದರೆ ಮಾಡಿ, ಬೇರೆ ಕಡೆಗೆ ನೀರು ಹರಿಸುವುದು ಸರಿಯೇ ? ಎಂದು ಅವರು ಪ್ರಶ್ನಿಸಿದ್ದಾರೆ.

ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ನೀರು ತರುವ ಯೋಜನೆ ಇನ್ನೂ ಪ್ರಾರಂಭವಾಗಿಲ್ಲ. ಟೆಂಡರ್ ಪ್ರಕ್ರಿಯೆ ಈಗ ಪ್ರಾರಂಭವಾಗುತ್ತಿದೆ. ಶರವೇಗದಲ್ಲಿ ಕಾಮಗಾರಿ ನಡೆದರೂ 2 ವರ್ಷ ಸಮಯ ಬೇಕಾಗುತ್ತದೆ ಎಂದು ಮಾಹಿತಿಗಳಿಂದ ತಿಳಿದಿದೆ ಎಂದು ರೈತ ಮುಖಂಡರು ಹೇಳಿದರು.

ಭದ್ರಾ ಜಲಾಶಯದಲ್ಲಿ ಸದ್ಯ 67.600 ಟಿಎಂಸಿ ನೀರಿದ್ದು, ಇದರಲ್ಲಿ ಕುಡಿಯುವುದಕ್ಕೆ 8 ಟಿಎಂಸಿ ಮತ್ತು ಬಳಸಲಾಗದ ನೀರು 8.5 ಟಿಎಂಸಿ ಸೇರಿ ಒಟ್ಟು 16.5 ಟಿಎಂಸಿ ಆಗುತ್ತದೆ.

ಉಳಿದ 51.5 ಟಿಎಂಸಿ ನೀರಿನಲ್ಲಿ ಚಿತ್ರದುರ್ಗಕ್ಕೆ ನೀರು ಹರಿಸಿದ ನಂತರ 45 ಟಿಎಂಸಿ ನೀರು ಉಳಿಯುತ್ತದೆ. ಭದ್ರಾ ಅಚ್ಚುಕಟ್ಟಿನ ರೈತರು ಮಳೆಗಾಲ ಮತ್ತು ಬೇಸಿಗೆ ಬೆಳೆ ಬೆಳೆಯಲು 60 ಟಿಎಂಸಿ ನೀರು ಬೇಕಾಗುತ್ತದೆ.

ಪರಿಸ್ಥಿತಿ ಹೀಗಿರುವಾಗ ಸರ್ಕಾರ ತಕ್ಷಣ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ನೀರು ಹರಿಸುವ ಕಾಮಗಾರಿ ಆರಂಭಿಸಿ, ತ್ವರಿತ ಗತಿಯಲ್ಲಿ ಮುಗಿಸಿ, ಮುಂದಿನ ಮಳೆಗಾಲದ ವೇಳೆಗೆ ನೀರು ಹರಿಸಬೇಕೆಂಬುದು ರೈತ ಮುಖಂಡರ ಆಗ್ರಹವಾಗಿದೆ.

## ಚೀನಾದ ಮೇಲೆ ಕೂಡಲೇ ಯುದ್ಧ ಸಾರಿ: ಎಂ.ಎಸ್.ಕೆ. ಶಾಸ್ತ್ರಿ

ದಾವಣಗೆರೆ, ಸೆ.1- ಭಾರತ ದೇಶ ಈ ಕೂಡಲೇ ಚೀನಾದ ಮೇಲೆ ಯುದ್ಧ ಸಾರಲಿ ಎಂದು ಕರ್ನಾಟಕ ಪ್ರದೇಶ ರೈತ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಪ್ರಧಾನಿ ಹಾಗೂ ರಕ್ಷಣಾ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. ಕಮಾಂಡರ್ ಬ್ರಿಗೇಡಿಯರ್ ಕ್ಯಾಪ್ಟನ್‌ಗಳ ಜೊತೆ ಮಾತುಕತೆ ನಡೆಸುತ್ತಾ, ಭಾರತ ತಡ ಮಾಡುತ್ತಾ ಬಂದರೆ ಕ್ಯಾಲೆಂಡರ್‌ಗಳಲ್ಲಿ ದಿನಗಳು ಉರುಳಿ, ನವೆಂಬರ್ ತಿಂಗಳು ಬಂದು ಲಡಾಕ್ ಮತ್ತು ಗಲ್ವಾನ್ ಪ್ರದೇಶಗಳಲ್ಲಿ ತಾಪಮಾನವು -20 ಡಿಗ್ರಿಯಾಗಿ ಹಿಮಪಾತ ಸುರಿದು ಭಾರತೀಯ ಸೈನ್ಯಕ್ಕೆ ಹಿಂದೇಟು ಕೊಡಲಿದೆ ಎಂದು ಸಂಘವು ಎಚ್ಚರಿಸಿದೆ.

## 4ರಂದು ನಗರಕ್ಕೆ ಸಚಿವ ಭೈರತಿ

ದಾವಣಗೆರೆ, ಸೆ.1- ನಗರಾಭಿವೃದ್ಧಿ ಹಾಗೂ ದಾವಣಗೆರೆ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ಇದೇ ದಿನಾಂಕ 4 ರ ಶುಕ್ರವಾರ ಸಂಜೆ 5 ಗಂಟೆಗೆ ನಗರಕ್ಕೆ ಆಗಮಿಸಿ, ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು.

ದಿನಾಂಕ 5 ರ ಶನಿವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾಡಳಿತ ಹಾಗೂ ಜಿಲ್ಲಾ ಶಿಕ್ಷಕರ ಸಂಘದಿಂದ ಸರ್ಕಾರಿ ನೌಕರರ ಭವನದಲ್ಲಿ ಏರ್ಪಾಡಾಗಿರುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಸಚಿವರು ಭಾಗವಹಿಸುವರು. ನಂತರ ಮಧ್ಯಾಹ್ನ 12 ರಿಂದ 1 ವರೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಭೇಟಿ ಮಾಡುವರು. ನಂತರ ಮಧ್ಯಾಹ್ನ 2.30ಕ್ಕೆ ನಗರದಿಂದ ಹುಬ್ಬಳ್ಳಿಗೆ ಪ್ರಯಾಣಿಸುವರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಚ್.ಕೆ.ಆರ್. ಸರ್ಕಲ್, ಕೆ.ಇ.ಬಿ ಕಾಲೋನಿ, ನಿಟುವಳ್ಳಿ ಹಾಗು ನಿಟುವಳ್ಳಿ ಹೊಸಬಡಾವಣೆ, ಮೌನೇಶ್ವರ ಬಡಾವಣೆ, ಸೈಯದ್ ಪೀರ್ ಬಡಾವಣೆ, ಐ.ಟಿ.ಐ. ರಿಂಗ್‌ರಸ್ತೆ, ಜಯನಗರ, ದುರ್ಗಾಂಬಿಕ ದೇವಸ್ಥಾನ ಸುತ್ತಮುತ್ತ, ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ, ಭಗೀರಥ ಸರ್ಕಲ್,ಕಾಳಿಕಾಂಬ ದೇವಸ್ಥಾನ, ಶಕ್ತಿನಗರ, ಇ.ಎಸ್.ಐ ಆಸ್ಪತ್ರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವುಂಟಾಗಲಿದೆ.

## ನಗರದಲ್ಲಿ ಇಂದು ಉದ್ಯೋಗ ಮೇಳ

ಮಿಲ್ಲತ್ ಕೈಗಾರಿಕಾ ತರಬೇತಿ ಸಂಸ್ಥೆ ಹಾಗೂ ವಿಎಸ್‌ಎಸ್ ಎಂಟರ್‌ಪ್ರೈಸಸ್ ಸಹಯೋಗದಲ್ಲಿ ಕೋಲಾರದಲ್ಲಿರುವ ಹೋಂಡಾ ಕಂಪೆನಿಗೆ ಐಟಿಐ ಪಾಸಾದ ತರಬೇತಿದಾರರಿಗೆ ಇಂದು ಬೆಳಿಗ್ಗೆ 10.30 ಕ್ಕೆ ಉದ್ಯೋಗ ಮೇಳ ನಡೆಯಲಿದೆ. ಉದ್ಘಾಟನೆ : ಸಯ್ಯದ್ ಸೈಫುಲ್ಲಾ. ಮುಖ್ಯ ಅತಿಥಿಗಳು : ಸಯ್ಯದ್ ಖಾಲಿದ್ ಅಹ್ಮದ್, ಮಹಮ್ಮದ್ ಅಫ್ಸರ್, ಶೈಲಜಾ, ಚಮನ್ ಸಾಬ್, ಮಹಬೂಬ್ ಮತ್ತಿತರರು.

# ಚುನಾವಣಾ ಆಯುಕ್ತರಾಗಿ ರಾಜೀವ್ ಕುಮಾರ್



ನವದೆಹಲಿ, ಸೆ. 1 - ಚುನಾವಣಾ ಆಯುಕ್ತರಾಗಿ ಮಾಜಿ ಅಧಿಕಾರಿ ರಾಜೀವ್ ಕುಮಾರ್ ಇಂದು ಅಧಿಕಾರ ವಹಿಸಿಕೊಂಡಿದ್ದಾರೆ.

ಅಶೋಕ್ ಲವಾಸಾ ಅವರು ಏಷಿಯಾ ಅಭಿವೃದ್ಧಿ ಬ್ಯಾಂಕ್ ಉಪಾ ಧ್ಯಕ್ಷರಾಗಲು ನೀಡಿದ ರಾಜೀನಾಮೆ ಯಿಂದ ತೆರವಾಗಿದ್ದ ಸ್ಥಾನಕ್ಕೆ ಕುಮಾರ್ ಬಂದಿದ್ದಾರೆ. ನಿವೃತ್ತರಾಗಿದ್ದ 1984ರ ತಂಡದ ಐಎಎಸ್ ಅಧಿಕಾರಿ ಕುಮಾರ್, 2025ರವರೆಗೆ ಐದು ವರ್ಷಗಳ ಅವಧಿ ಹೊಂದಿದ್ದಾರೆ. 2024ರ ಲೋಕ ಸಭಾ ಚುನಾವಣೆ ಅವರ ನೇತೃತ್ವದಲ್ಲಿ ನಡೆಯಲಿದೆ. ಚುನಾವಣಾ ಆಯೋಗದ ನಿಯಮಗಳ ಪ್ರಕಾರ, ಆಯುಕ್ತರ ಅವಧಿ ಆರು ವರ್ಷ ಇಲ್ಲವೇ 65 ವರ್ಷಗಳಲ್ಲಿ ಯಾವುದು ಮೊದಲೋ ಅದು ಇರಲಿದೆ.

ಕುಮಾರ್ ಅವರು ಕಳೆದ ವರ್ಷ ಫೆಬ್ರವರಿಯಲ್ಲಿ ಹಣಕಾಸು ಕಾರ್ಯದರ್ಶಿಯಾಗಿ ನಿವೃತ್ತರಾಗಿದ್ದರು. ನಂತರ ಅವರನ್ನು ಸಾರ್ವಜನಿಕ ಉದ್ಯಮಗಳ ಆಯ್ಕೆ ಮಂಡಳಿ ಅಧ್ಯಕ್ಷರಾಗಿ ಏಪ್ರಿಲ್ ತಿಂಗಳಲ್ಲಿ ನೇಮಿಸಲಾಗಿತ್ತು.

## ಉಕ್ಕಡಗಾತ್ರಿ ಪಿಡಿಓ ಸೇರಿ 17 ಜನರಿಗೆ ಕೊರೊನಾ

ಮಲೇಬೆನ್ನೂರು, ಸೆ. 1- ಹೋಬಳಿಯಲ್ಲಿ ಮಂಗಳವಾರ 17 ಕೊರೊನಾ ಪಾಸಿಟಿವ್ ಪ್ರಕರಣಗಳು ದೃಢ ಪಟ್ಟಿವೆ. ಮಲೇಬೆನ್ನೂರಿನಲ್ಲಿ 7, ಕೆ.ಎನ್. ಹಳ್ಳಿ, ಧೂಳೆಹೊಳೆಯಲ್ಲಿ ತಲಾ ಒಬ್ಬರಿಗೆ, ನಂದಿಗುಡಿಯಲ್ಲಿ ಐವರಿಗೆ ಮತ್ತು ಉಕ್ಕಡಗಾತ್ರಿಯಲ್ಲಿ ಮೂವರಿಗೆ ಸೋಂಕು ತಗುಲಿದೆ. ಉಕ್ಕಡಗಾತ್ರಿ ಗ್ರಾ.ಪಂ ಪಿಡಿಓ ಅವರಿಗೂ ಸೋಂಕು ಕಾಣಿಸಿಕೊಂಡಿದೆ ಎಂದು ಉಪ ತಹಶೀಲ್ದಾರ್ ರವಿ ಮಾಹಿತಿ ನೀಡಿದ್ದಾರೆ.

## ಒಲವು ತೋರದ ಕೇಂದ್ರ

(1ನೇ ಪುಟದಿಂದ) ಕೇಂದ್ರ ಸರ್ಕಾರ ತಿಳಿಸಿದೆ. ಬ್ಯಾಂಕಿಂಗ್ ವಲಯ ಎದುರಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೆ ಒಂದೇ ಪರಿಹಾರ ಸಾಧ್ಯವಾಗದು ಎಂದು ಕೇಂದ್ರ ಹಣಕಾಸು ಸಚಿವಾಲಯದ ಅಧೀನ ಕಾರ್ಯದರ್ಶಿ ಆದಿತ್ಯ ಕುಮಾರ್ ಘೋಷ್ ಅವರು ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿದ್ದಾರೆ.

## ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಇಲ್ಲ

ಹಲಗೇರಿ ರಸ್ತೆ ಅಗಲೀಕರಣ ಪ್ರಯುಕ್ತ 220/110 ಕೆ.ವಿ ಉಪ-ಕೇಂದ್ರದಿಂದ ಹೊರಡುವ 33 ಕೆವಿ ಆರ್.ಎಸ್.ಎನ್.ಜಿ. ಮಾರ್ಗದಲ್ಲಿ ಇಂದು ಮತ್ತು ನಾಳೆ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಇರುವುದಿಲ್ಲ.




# ಮಾದಕ : ಚಿತ್ರರಂಗದ 15 ಜನ

(1ನೇ ಪುಟದಿಂದ) ಹೇಳಿದ್ದಾರೆ. ಸೋಮವಾರ ಸೆಂಟ್ರಲ್ ಕ್ರೈಮ್ ಬ್ರಾಂಚ್ಪೊಲೀಸರು ಸುಮಾರು ಐದು ಗಂಟೆ ಕಾಲ ಇಂದ್ರಜಿತ್ ಅವರಿಂದ ಮಾಹಿತಿ ಪಡೆದಿದ್ದರು. ಕೆಲ ತಾರೆಯರು ಧೂಮಪಾನ ಮಾಡಲು ಆರಂಭಿಸಿ ನಂತರ ಕೊಕೇನ್‌ಗೆ ಬಂದಿದ್ದಾರೆ. ಅವರು ಈಗಿನ ಯುವಕರ ಪ್ರತಿನಿಧಿಗಳಂತಾಗಿದ್ದಾರೆ. ಜನರು ಮಾದಕ ಸೇವನೆ 'ಕೂಲ್' ಎಂದು ಭಾವಿಸಿದ್ದಾರೆ ಎಂದೂ ಇಂದ್ರಜಿತ್ ತಿಳಿಸಿದ್ದಾರೆ.

ಚಿತ್ರೋದ್ಯಮದಲ್ಲೇ ಇರುವ ಕೆಲ ಮಾದಕ ಮಾಫಿಯಾಗಳು ಸ್ಯಾಂಡಲ್‌ವುಡ್‌ನಲ್ಲಿ ಪಾರ್ಟಿಗಳನ್ನೂ ಆಯೋಜಿಸುತ್ತಿದ್ದಾರೆ ಎಂದು ಲಂಕೇಶ್ ಹೇಳಿದ್ದಾರೆ. ಮಾದಕ ಪೂರೈಕೆ ಜಾಲದ ಹಿಂದೆ ಮುಂಬೈನ ಭೂಗತರು ಭಾಗಿಯಾಗಿರುವ ಸಾಧ್ಯತೆಯನ್ನು ಅವರು ತಳ್ಳಿ ಹಾಕಿಲ್ಲ.

# ಎಜಿಆರ್‌ಗೆ 10 ವರ್ಷ ಗಡುವು

(1ನೇ ಪುಟದಿಂದ) ಕಂಪನಿಗಳು ಒಟ್ಟಾರೆ 1.6 ಲಕ್ಷ ಕೋಟಿ ರೂ.ಗಳ ಎ.ಜಿ.ಆರ್. ಬಾಕಿ ಹೊಂದಿವೆ.

ಟೆಲಿಕಾಂ ಕಂಪನಿಗಳು ತಮ್ಮ ಬಾಕಿಯ ಶೇ.10ರಷ್ಟನ್ನು ಮಾರ್ಚ್ 31, 2021ರ ಒಳಗೆ ಪಾವತಿಸಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ದೂರಸಂಪರ್ಕ ಇಲಾಖೆಯ ಮನವಿಯ ಆಧಾರದ ಮೇಲೆ ನ್ಯಾಯಮೂರ್ತಿ ಅರುಣ್ ಮಿಶ್ರಾ ಅವರ ನೇತೃತ್ವದ ಪೀಠ ಈ ತೀರ್ಪು ನೀಡಿದ್ದು, ಈ ತೀರ್ಪು ಅಂತಿಮ ಎಂದು ತಿಳಿಸಲಾಗಿದೆ.

ಸಂಬಂಧಿಸಿದ ಟೆಲಿಕಾಂ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರು ಇಲ್ಲವೇ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಬಾಕಿ ಪಾವತಿಯ ಬಗ್ಗೆ ಮುಚ್ಚಳಿಕೆ ಇಲ್ಲವೇ ವೈಯಕ್ತಿಕ ಗ್ಯಾರಂಟಿಯನ್ನು ನಾಲ್ಕು ವಾರಗಳ ಒಳಗೆ ಸಲ್ಲಿಸಬೇಕು ಎಂದು ಪೀಠ ಹೇಳಿದೆ.

ಕಂತುಗಳನ್ನು ಪಾವತಿಸದೇ ಹೋದರೆ ದಂಡ, ಬಡ್ಡಿ ಹಾಗೂ ನ್ಯಾಯಾಂಗ ನಿಂದನೆ ಎದುರಿಸಬೇಕಾಗುತ್ತದೆ ಎಂದು ಕಂಪನಿಗಳಿಗೆ ಪೀಠ ಎಚ್ಚರಿಕೆ ನೀಡಿದೆ. ದಿವಾಳಿ ಪ್ರಕ್ರಿಯೆಯಲ್ಲಿರುವ ಟೆಲಿಕಾಂ ಕಂಪನಿಗಳ ಸ್ಪೆಕ್ಟ್ರಮ್ ಮಾರಾಟ ಮಾಡುವ ಬಗ್ಗೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧೀಕರಣ (ಎನ್.ಸಿ.ಎಲ್.ಟಿ.) ನಿರ್ಧರಿಸಬೇಕು ಎಂದೂ ಪೀಠ ತಿಳಿಸಿದೆ. ಟೆಲಿಕಾಂ ಕಂಪನಿಗಳು ಕೊನೆ ಕಂತು ಪಾವತಿಸುವವರೆಗೂ ದೂರಸಂಪರ್ಕ ಇಲಾಖೆಗೆ ಅವುಗಳು ನೀಡಿರುವ ಬ್ಯಾಂಕ್ ಗ್ಯಾರಂಟಿ ಸಕ್ರಿಯವಾಗಿರಲಿದೆ ಎಂದು ಪೀಠ ಹೇಳಿದೆ.

## ಗೌತಮ್ ಸಹಕಾರಿ ಸೊಸೈಟಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪುರಸ್ಕಾರ

ದಾವಣಗೆರೆ,ಸೆ.1- ನಗರದ ಗೌತಮ್ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಚಲವಾದಿ ಸಮಾಜದ 25 ಪ್ರತಿಭಾನ್ವಿತ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುತ್ತದೆ. ಅರ್ಹ ವಿದ್ಯಾರ್ಥಿಗಳು ನಗರದ ರೈತರ ಬೀದಿಯಲ್ಲಿರುವ ಸಂಘದ ಕಚೇರಿಯಲ್ಲಿ ಇದೇ ದಿನಾಂಕ 15ರೊಳಗೆ ಹೆಸರು ನೋಂದಾಯಿಸುವಂತೆ ಸಂಘದ ಪ್ರಕಟಣೆ ತಿಳಿಸಿದೆ. ವಿವರಕ್ಕೆ ಸಂಪರ್ಕಿಸಿ : 94491-63356, 98862 01014, 91089 53018.

## ಹೊನ್ನಾಳಿಗೆ ಇಂದು ಎಸಿಬಿ ಭೇಟಿ

ದಾವಣಗೆರೆಯ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ಉಪಾಧೀಕ್ಷಕರು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ಹೊನ್ನಾಳಿ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ. ವಿವರಕ್ಕೆ 08192-236600, 94808 06227, 94808 06284 ರಲ್ಲಿ ಸಂಪರ್ಕಿಸುವಂತೆ ಎಸಿಬಿ ಪೊಲೀಸ್ ಠಾಣೆ ಡಿವೈಎಸ್ಪಿ ಹೆಚ್.ಎಸ್. ಪರಮೇಶ್ವರಪ್ಪ ತಿಳಿಸಿದ್ದಾರೆ.



## ಕಾಣೆಯಾಗಿದ್ದಾರೆ

ಹರಿಹರ ತಾ. ಕುಂಬಳೂರು ಗ್ರಾಮದ ಗಾಂಧಿ ಬಸಪ್ಪನವರ ಹಿರಿಯ ಪುತ್ರರಾದ **ಗಾಂಧಿ ಮಂಜುನಾಥ್** (40 ವರ್ಷ) ಇವರು ಕಳೆದ 15 ವರ್ಷಗಳ ಹಿಂದೆ ಮನೆಯಿಂದ ಕಾಣೆಯಾಗಿದ್ದಾರೆ.

ನಾವು ನಿನ್ನನ್ನು ಎಲ್ಲಾ ಕಡೆ ಹುಡುಕಾಟ ನಡೆಸಿದ್ದೇವೆ. ಇದುವರೆಗೂ ನಿನ್ನ ಸುಳಿವು ಸಿಕ್ಕಿಲ್ಲ. ನೀನು ಎಲ್ಲೇ ಇದ್ದರೂ ಬೇಗ ಮನೆಗೆ ಬಾ....

**ನಿನ್ನ ನಿರೀಕ್ಷೆಯಲ್ಲಿ...... ತಂದೆ-ಸಹೋದರ, ಪತ್ನಿ, ಮಗಳು.**

ವಿ.ಸೂ. : ಚಿತ್ರದಲ್ಲಿರುವ ಈ ವ್ಯಕ್ತಿಯ ಬಗ್ಗೆ ಯಾರಿಗಾದರು ಸುಳಿವು ಸಿಕ್ಕಲ್ಲಿ ಈ ನಂಬರಿಗೆ ತಿಳಿಸಬೇಕಾಗಿ ವಿನಂತಿ. **ಮೊಬೈಲ್ ನಂ. 76194 64579**

## ಉಪ ವಿಭಾಗಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಉಪ ವಿಭಾಗ ದಾವಣಗೆರೆ.

ನಂ.ಎಲ್.ಎ.ಕ್ಯೂ/ಸಿಆರ್/ 43/20-21 ದಿನಾಂಕ : 01.09.2020

### ಪ್ರಕಟಣೆ

**ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ನಿರ್ಮಿಸಲು ಉದ್ದೇಶಿಸಿರುವ ಹರಿಹರ ತಾಲ್ಲೂಕು ಗುತ್ತೂರು ಗ್ರಾಮದ 400/220 ಕೆ.ವಿ. ಸಬ್ ಸ್ಟೇಷನ್ ನಿಂದ ಭರಮಸಾಗರ ಏತ ನೀರಾವರಿ ಯೋಜನೆಗಾಗಿ ಹಲಸಬಾಳು ಸಬ್ ಸ್ಟೇಷನ್‌ವರೆಗೂ 66/11 ಕೆ.ವಿ. ವಿದ್ಯುತ್ ಮಾರ್ಗ ಹಾದು ಹೋಗುವ ಜಮೀನು ಮಾಲೀಕರಿಗೆ ಎಲೆಕ್ಟ್ರಿಕಲ್ ಕಾಯ್ದೆ 2003 ರ ಭಾಗ 8 ಕಲಂ 67-68 ರಂತೆ ಸಾರ್ವಜನಿಕರಿಗೆ ಯೋಜನೆಗಳ ಮಾಹಿತಿ ನೀಡುವ ದೃಷ್ಟಿಯಿಂದ ಈ ಪ್ರಕಟಣೆ ನೀಡಲಾಗಿದೆ.**

| ಕ್ರ.ಸಂ | ಗೋಪುರ ಸಂಖ್ಯೆ | ಸರ್ವೆ ಸಂಖ್ಯೆ | ಗ್ರಾಮದ ಹೆಸರು | ಹೋಬಳಿ | ತಾಲ್ಲೂಕು | ಜಿಲ್ಲೆ |
|---|---|---|---|---|---|---|
| 1 | T-71 | 1 | ರಾಜನಹಳ್ಳಿ | ಕಸಬಾ | ಹರಿಹರ | ದಾವಣಗೆರೆ |
| 2 | T-68 to 70 | 29, 28, 27, 25, 24, 8, 10, 11, 12, 13, 14, 15, & 16 | ರಾಜನಹಳ್ಳಿ | ಕಸಬಾ | ಹರಿಹರ | ದಾವಣಗೆರೆ |
| 3 | T-65 to T-67 | 5 & 6 to 31 & 30 | ರಾಜನಹಳ್ಳಿ | ಕಸಬಾ | ಹರಿಹರ | ದಾವಣಗೆರೆ |
| 4 | T-63 | 51 & 31 | ರಾಜನಹಳ್ಳಿ | ಕಸಬಾ | ಹರಿಹರ | ದಾವಣಗೆರೆ |
| 5 | T-6 to T-10 | 70, 35, 36 & 34 | ಗುತ್ತೂರು | ಕಸಬಾ | ಹರಿಹರ | ದಾವಣಗೆರೆ |
| 6 | T-6 to T-10 | 70, 35, 36 & 34 | ಗುತ್ತೂರು | ಕಸಬಾ | ಹರಿಹರ | ದಾವಣಗೆರೆ |
| 7 | T-5 | 71 | ಗುತ್ತೂರು | ಕಸಬಾ | ಹರಿಹರ | ದಾವಣಗೆರೆ |
| 8 | T-3 to T-4 | 64 | ಗುತ್ತೂರು | ಕಸಬಾ | ಹರಿಹರ | ದಾವಣಗೆರೆ |
| 9 | T-2 | 56 & 64 | ಗುತ್ತೂರು | ಕಸಬಾ | ಹರಿಹರ | ದಾವಣಗೆರೆ |
| 10 | T-1 | | | ಕಸಬಾ | ಹರಿಹರ | ದಾವಣಗೆರೆ |

ಎಲೆಕ್ಟ್ರಿಕಲ್ ಕಾಯ್ದೆ 2003 ರ ಭಾಗ 8 ಕಲಂ 67-68 ರಂತೆ ಸದರಿ ಯೋಜನೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಉಪವಿಭಾಗಾಧಿಕಾರಿಗಳು ದಾವಣಗೆರೆ ಉಪವಿಭಾಗ ದಾವಣಗೆರೆ ಇವರ ಕಛೇರಿಗೆ ಮೇಲ್ಕಂಡ ಗ್ರಾಮಗಳ ಸರ್ವೆ ನಂಬರ್‌ಗಳ ಮಾಲೀಕರು ಈ ಪ್ರಕಟಣೆ ಪ್ರಕಟವಾದ 07 ದಿನಗಳ ಒಳಗಾಗಿ ಲಿಖಿತವಾಗಿ ಸಲ್ಲಿಸಲು ಕೋರಿದೆ.

ಸಹಿ/-
ಉಪವಿಭಾಗಾಧಿಕಾರಿಗಳು
ದಾವಣಗೆರೆ ಉಪವಿಭಾಗ, ದಾವಣಗೆರೆ.

## ಆಗಸ್ಟ್‌ನಲ್ಲಿ 86,449 ಕೋ.ರೂ. ಜಿಎಸ್ಟಿ ಸಂಗ್ರಹ

ನವದೆಹಲಿ, ಸೆ. 1 – ಆಗಸ್ಟ್ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ 86,449 ಕೋಟಿ ರೂ.ಗಳಿಗೆ ಕುಸಿದಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಇದೇ ತಿಂಗಳು 98,202 ಕೋಟಿ ರೂ. ತೆರಿಗೆ ಸಂಗ್ರಹವಾಗಿತ್ತು. ಈ ವರ್ಷ ಶೇ.12ರಷ್ಟು ತೆರಿಗೆ ಸಂಗ್ರಹ ಕಡಿಮೆಯಾಗಿದೆ. ದೇಶದಲ್ಲಿ ಆರ್ಥಿಕ ಚಟುವಟಿಕೆ ಚುರುಕಾಗಿರುವುದು ತೆರಿಗೆ ಸಂಗ್ರಹದಿಂದ ಕಂಡು ಬರುತ್ತದೆ. ಆದರೆ, ಆಮದಿನಲ್ಲಿ ಕುಸಿತವಾಗಿರುವುದು ತೆರಿಗೆ ಸಂಗ್ರಹ ಇಳಿಕೆಗೆ ಕಾರಣವಾಗಿದೆ ಎಂದು ಪರಿಣಿತರು ಅಭಿಪ್ರಾಯ ಪಟ್ಟಿದ್ದಾರೆ.

## ಸಚಿವ ಈಶ್ವರಪ್ಪಗೆ ಕೊರೊನಾ



ಬೆಂಗಳೂರು, ಸೆ. 1 – ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರಿಗೆ ಕೊರೊನಾ ಸೋಂಕು ತಗುಲಿದ್ದು, ಅವರು ವೈದ್ಯರ ಸಲಹೆ ಮೇರೆಗೆ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕೊರೊನಾ ಸೋಂಕಿರುವುದು ದೃಢಪಟ್ಟಿದೆ. ಇದನ್ನು ಹೊರತು ಪಡಿಸಿ ಬೇರೆ ಯಾವುದೇ ಆರೋಗ್ಯ ಸಮಸ್ಯೆ ಇಲ್ಲ. ವೈದ್ಯರ ಸಲಹೆ ಮೇರೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ಈಶ್ವರಪ್ಪ ತಿಳಿಸಿದ್ದಾರೆ.




## ಜನ್ಮ ದಿನದ ಶುಭಾಶಯಗಳು...



ಸ್ನೇಹಜೀವಿ ಹಾಗೂ ನಮ್ಮೆಲ್ಲರ ಆತ್ಮೀಯ ಗೆಳೆಯ
ಗ್ಲೋಬಲ್ ಮ್ಯಾನ್ ಪವರ್ ಏಜೆನ್ಸಿ, ಗ್ಲೋಬಲ್ ಟ್ರೇಡರ್ಸ್, ಜಾಜೂರ್ ಅಂಡ್ ಕೋ ಹಾಗೂ ಕಿಯೋನಿಕ್ಸ್ ಯುವ.ಕಾಂ. ನ
ಮಾಲೀಕರೂ, ಯುವ ಉದ್ಯಮಿಗಳೂ ಆಗಿರುವ

### ಶ್ರೀ ರಮೇಶ್ ಬಿ.ಜೆ.

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

-: ಸ್ನೇಹಿತರ ಬಳಗ :-

- ಉಮೇಶ್ ಪವಾಡರಂಗವ್ವನಹಳ್ಳಿ.
- ಜಯಕುಮಾರ್ ಶ್ಯಾಗಲೆ.
- ಚೇತನ್ ಪಲ್ಲಾಗಟ್ಟೆ
- ಮಲ್ಲಿಕಾರ್ಜುನ್ ಗೋಣಿವಾಡ
- ಪ್ರವೀಣ್ ಸ್ಯಾಮ್‌ಸಂಗ್
- ಅಣಬೇರು ಗಂಗಾಧರ್
- ನಾಗರಾಜ್ ಸೀಮೆಎಣ್ಣೆ
- ಡಾ|| ಸುಶಾಂತ್ ಹೆಚ್.ವಿ.
- ರಾಘವೇಂದ್ರ
- ಫಣಿಕುಮಾರ್
- ಅರವಿಂದ್ ಯು.ಎಸ್.
- ಪ್ರವೀಣ್ ಶ್ಯಾಬನೂರು



## ಆತ್ಮೀಯ ಗೆಳೆಯನಿಗೆ ನಮನ

ಇಂಜಿನಿಯರ್

### ಬೆಳಗಾವಿ ವಿಜಯ್‌ಕುಮಾರ್

ನಿಧನ : 31.08.2020

ಸರಳ ವ್ಯಕ್ತಿ, ಸದಾ ಹಸನ್ಮುಖಿ, ಸರಿಸಾಟಿ ಇಲ್ಲದ ಸ್ನೇಹಜೀವಿ, ಅಜಾತ ಶತ್ರು, ಸದಾ ನಗುತ್ತಾ, ನಗಿಸುತ್ತಾ ಇರುತ್ತಿದ್ದ ನಮ್ಮನ್ನಗಲಿದ ಆತ್ಮೀಯ ಗೆಳೆಯನ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಸದಾನಂದ ಎಸ್. ಮಠದ್, ವಿನಾಯಕ ಇಂಡಸ್ಟ್ರೀಸ್
- ಜಿ.ಆರ್. ತಿಪ್ಪೇಶ್, ಭೂಮಿಕ ಸಾಯಿಶ್ರೀ
- ಬಿ.ಸುರೇಶ್ - ಸುರೇಶ್ ಪೇಪರ್ ಮಾರ್ಟ್
- ಶರಣ ಪ್ರಭು
- ಐರಣಿ ನಾಗರಾಜ್
- ಅಣಬೇರು ಜಗದೀಶ್
- ಬಿ.ಎಂ. ರಾಜು- ವಿಜಯ ಪ್ರಿಂಟರ್ಸ್
- ಜಯಪ್ರಕಾಶ್
- ಕೊಟ್ರೇಶ್- ನಿತೀಶ್ ಆಪ್ಟಿಶಿಯನ್ಸ್
- ಮಂಜು - ಅರುಣ ಪ್ರೆಸ್
- ಮಾಗಾನಹಳ್ಳಿ ಸಂಗನಬಸಪ್ಪ - ಪಾಪಣ್ಣ

|| ಶ್ರೀ ಸೋಮೇಶ್ವರ ಪ್ರಸನ್ನ ||

## ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಕುಮಾರ್ ಎ. ಕುರ್ಡೇಕರ್ ಮತ್ತು ಶ್ರೀ ಓಂಕಾರ ಎ. ಕುರ್ಡೇಕರ್
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 19.08.2020ನೇ ಬುಧವಾರ ರಾತ್ರಿ 9.30ಕ್ಕೆ ನಮ್ಮ ಪೂಜ್ಯ ತಂದೆಯವರಾದ

### ಶ್ರೀ ಅನಂತ್ ವೀರಪ್ಪ ಕುರ್ಡೇಕರ್

ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

### ವೈಕುಂಠ ಸಮಾರಾಧನೆಯನ್ನು

ದಿನಾಂಕ 02.09.2020ನೇ ಬುಧವಾರ ಮಧ್ಯಾಹ್ನ 12.00 ಘಂಟೆಗೆ ದಾವಣಗೆರೆ ಸಿಟಿ ಚೌಕಿಪೇಟೆಯ ಶ್ರೀ ಬಕ್ಕೇಶ್ವರ ದೇವಸ್ಥಾನದ ಆವರಣದಲ್ಲಿರುವ ಮಾಗಾನಹಳ್ಳಿ ಬಸಮ್ಮ ಬಸಪ್ಪ ಕಲ್ಯಾಣ ಮಂಟಪದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಸರಳ ಅನಂತ್ ಕುರ್ಡೇಕರ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುರ್ಡೇಕರ್ ಕುಟುಂಬದವರು ಹಾಗೂ ಬಂಧುಗಳು. ಮೊ : 96112 45808

ವಿ.ಸೂ. : ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## ಎರಡನೇ ವರ್ಷದ ಪುಣ್ಯಸ್ಮರಣೆ



### ದಿ|| ಶ್ರೀಮತಿ ಈರಮ್ಮ ಸಪ್ಪಣ್ಣನವರು

ನಿಧನ : 02.09.2018

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷಗಳಾದವು, ಸದಾ ನಿಮ್ಮ ಸ್ಮರಣೆಯಲ್ಲಿರುವ

ಮಗಳು : ಶ್ರೀಮತಿ ಲತಾ ವಿಶ್ವನಾಥ
ಮಗ : ಶ್ರೀ ನವೀನ್ ಗೀತಾ
ಮೊಮ್ಮಕ್ಕಳು: ಚಂದ್ರಶೇಖರ್, ಸಂದೇಶ, ಪ್ರಜ್ಞಾ (ಪಿಂಕಿ) ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂಧು - ಮಿತ್ರರು.








JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte